VIJAYAKUMAR KANNUR
Digitally signed by VIJAYAKUMAR KANNUR
Date: 2026.04.02 10:41:51 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 01.04.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ವಾದಿ ಪರ ಶ್ರೀ ಎಸ್ ಜಿ ಸಿ ವಕೀಲರಿಂದ**

ನಾನು ಸಾಕ್ಷಿದಾರನಿದ್ದು, ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದರ ವಿಚಾರಗಳನ್ನು ನಾನೇ ಹೇಳಿ ಬರೆಸಿದ್ದು, ಅದರಲ್ಲಿ ಬರೆದ ವಿಚಾರಗಳು ಸತ್ಯವಾಗಿರುತ್ತದೆ.

**ಪಾಟೀ ಸವಾಲುಃ ಪ್ರತಿವಾದಿ 2 ರವರ ಪರ ಶ್ರೀ ಪಿ ಎಂ ವಿ ವಕೀಲರಿಂದ :**

ನನ್ನ ಜಮೀನು ವಾದಿಯ ಜಮೀನಿನ ಪಕ್ಕದಲ್ಲಿ ಇರುವುದರಿಂದ ವಾದಿ ಮತ್ತು ಅವರ ಕುಟುಂಬದ ಬಗ್ಗೆ ಮಾಹಿತಿ ಇರುವುದು. ನನ್ನ ಜಮೀನಿನ ಸರ್ವೇ ನಂಬರ್ 107 ಶಿರೋಳ ಗ್ರಾಮದಲ್ಲಿ ಇರುವುದು . ನನ್ನ ಜಮೀನು ದಾವಾ ಆಸ್ತಿ ಸರ್ವೇ ನಂಬರ್ 101/5 ರ ಹತ್ತಿರದಲ್ಲಿ ಇರುವುದು. ನನ್ನ ಮತ್ತು ವಾದಿಯರ ಜಮೀನುಗಳು ಒಂದಕ್ಕೊಂದು ಹೊಂದಿಕೊಂಡಿರುವುದಿಲ್ಲ. ಸರ್ವೇ ನಂಬರ್ 101/5 ಮತ್ತು 165/1 ರ ಜಮೀನು ಮೂಲತಃ ವಾದಿಯ ತಂದೆಯ ಹೆಸರಿನಲ್ಲಿ ಇದ್ದವು. ಇವರಿಗೆ ಹೇಗೆ ಬಂದಿರುವವು ಎಂಬುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ.

2. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿರುವ ಸಂಗತಿಗಳಿಗೆ ಮಾಹಿತಿಯನ್ನು ವಾದಿ ಮತ್ತು ಪ್ರತಿವಾದಿಯರು ಕೊಟ್ಟಿರುವರು. ಅದರಲ್ಲಿ ಏನು ಬರೆದಿರುವರು ನನಗೆ ಮಾಹಿತಿ ಇರುವುದಿಲ್ಲ, ಏಕೆಂದರೆ ನನಗೆ ಓದಲು ಬರದೆ ಇರುವುದರಿಂದ. ಶಿರೋಳ ಗ್ರಾಮದ 2 ಜಮೀನುಗಳಲ್ಲಿ ಪ್ರತಿವಾದಿ 2 ರವರಿಗೂ ಪಾಲು ಇರುವುದು ಎಂದರೆ ಸರಿ. ಸರ್ವೇ ನಂಬರ್ 184/3 ರ ಜಮೀನನ್ನು ಮೃತ ಗಣೇಶ ದಿಃ 09.09.2015 ರಂದು ಭಾರತಿ ಪತ್ತಾರ ಎಂಬುವವರ ಕಡೆಯಿಂದ ಖರೀದಿ ಮಾಡಿರುವನು

ಎಂದರೆ ಸರಿ. ಆ ಪ್ರಕಾರ ಗಣೇಶನ ಹೆಸರು ಈ ಜಮೀನಿನ ಪಹಣಿ ಪತ್ರಿಕೆಯಲ್ಲಿ ದಾಖಲಾಗಿರುವುದು ಎಂದರೆ ಸರಿ. ಈ ಜಮೀನಿನ ಮಾಲೀಕ ಮತ್ತು ಕಬ್ಜೆ ಗಣಪತಿ ಮಾಳಿ ಇದ್ದನು ಎಂದರೆ ಸರಿಯಲ್ಲ. ಆತನು ಮತ್ತು ಆತನ ಸಹೋದರರು ಕೂಡಿಯೇ ಇದ್ದರು. ಈ ಜಮೀನನ್ನು ರೂ. 3,76,000/- ಗಳಿಗೆ ಖರೀದಿ ಮಾಡಿರುವರು. ಈ ಖರೀದಿ ವ್ಯವಹಾರದ ಸಮಯದಲ್ಲಿ ನಾನು ಭಾಗವಹಿಸಿರುವುದಿಲ್ಲ. ಈ ಸಂಗತಿ ನನಗೆ ಗಣಪತಿ ಮತ್ತು ವಾದಿ ಹೇಳಿರುವರು.

3. ಕುಟುಂಬದ ಮೂಲ ಪುರುಷ ವಿಠಲನಿಗೆ ಒಟ್ಟು 5 ಜನ ಮಕ್ಕಳು ಅದರಲ್ಲಿ ಇಬ್ಬರು ಗಂಡು ಮಕ್ಕಳು. ಈ ಜಮೀನನ್ನು ಖರೀದಿ ಮಾಡಲು ವಾದಿ ಎಷ್ಟು ಹಣ ಗಣಪತಿಗೆ ನೀಡಿರುವನು ಎಂದು ನನಗೆ ಮಾಹಿತಿ ಇರುವುದಿಲ್ಲ, ಆದರೆ ಗಣಪತಿ ಮತ್ತು ವಾದಿ ಇಬ್ಬರು ಕೂಡಿಯೇ ಈ ಜಮೀನು ಖರೀದಿ ಮಾಡಿರುವರು. ಈ ಜಮೀನನ್ನು ಖರೀದಿ ಮಾಡುವ ಪೂರ್ವದಲ್ಲಿ ಗಣಪವತಿ ಮತ್ತು ಭಾರತಿ ಪತ್ತಾರ ಇವರ ನಡುವೆ ಆದ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸರ್ವೇ ನಂಬರ್ 184/3 ರ ಜಮೀನಿನ ಚೆಕ್ಕು ಬಂದಿ ಗೊತ್ತಿರುವುದಿಲ್ಲ. ಈ ಜಮೀನನ್ನು ನಾನು ಯಾವುದೇ ಕಾಲಕ್ಕೂ ನೋಡುವ ಪ್ರಸಂಗ ಬಂದಿರುವುದಿಲ್ಲ ಎಂದರೆ ಸರಿ. ಗಣಪತಿ ಮೃತ ಪಟ್ಟ ನಂತರ ವಾರಸಾನಾತೆಯಿಂದ ಪ್ರತಿವಾದಿ 2 ರವರು ಕಬ್ಜೆಯನ್ನು ಹೊಂದಿ ಮಾಲೀಕೆನಾತೆಯಿಂದ ವಹಿವಾಟೆಯಲ್ಲಿ ಇರುವಳು ಎಂದರೆ ಸರಿ. ಶಿರೋಳ ಗ್ರಾಮದ ಜಮೀನುಗಳಲ್ಲಿ ಪ್ರತಿವಾದಿ 2 ರವರಿಗೂ ಪಾಲು ಇರುವುದು ಎಂದರೆ ಸರಿ. ಸರ್ವೇ ನಂಬರ್ 184/3 ರ ಜಮೀನಿನಲ್ಲಿ ವಾದಿ, ಪ್ರತಿವಾದಿ 1, 3 ಮತ್ತು 4 ರವರಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿ ನನಗೆ ಆತನ ಪರವಾಗಿ ಸಾಕ್ಷಿ ನುಡಿಯುವಂತೆ ಕೇಳಿಕೊಂಡಿರುವುದರಿಂದ ಆ ಕಾರಣಕ್ಕೆ ಆತನ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಶಿರೋಳ ಗ್ರಾಮದಿಂದ ನ್ಯಾಯಾಲಯದಿಂದ ದಾಖಲು ಮಾಡಿರುವ ದಾವೆಗಳಲ್ಲಿ ನಾನು ಹೆಚ್ಚಿನ ಪ್ರಮಾಣದಲ್ಲಿ ಸಾಕ್ಷಿದಾರ ಅಂತ ಸಾಕ್ಷಿ ನುಡಿಯುತ್ತೇನೆ ಎಂದರೆ ಸರಿಯಲ್ಲ. ನಾನು ಈ ಮೊದಲು ಯಾವುದೇ ದಾವೆಯಲ್ಲಿ ಸಾಕ್ಷಿ ನುಡಿದಿರುವುದಿಲ್ಲ. ನಾನು ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುವ ಉದ್ಯೋಗ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಯಾರ ಪರವಾಗಿ ಸಾಕ್ಷಿ ನುಡಿಯುವಂತೆ ವಿನಂತಿಸಿಕೊಳ್ಳುತ್ತಾರೋ ಅವರ ಪರವಾಗಿ ಸಾಕ್ಷಿ ನುಡಿಯುತ್ತೇನೆ ಎಂದರೆ ಸರಿಯಲ್ಲ.

ಪ್ರತಿವಾದಿ 1, 3 ಮತ್ತು 4 ರವರ ಪರವಾಗಿ ಯಾವುದೇ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ